# ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ರಾಜ್ಯ ಕೇಂದ್ರ ಕಾರ್ಯಾಲಯ, #39, ಶಾಂತಿಗೃಹ, ಅರಮನೆ ರಸ್ತೆ, ಬೆಂಗಳೂರು – 560 001

ದೂ:+91-80-2226 0017;+91-80-2226 7470;+91-80-2226 1047 ಮಿಂಚಂಚೆ: info@bsgkarnataka.org ಅಂತರ್ಜಾಲ: www.bsgkarnataka.org

ಸಂಖ್ಯೆ:SHQ/ORG.1/Letter/2026-27 / 1191 ದಿನಾಂಕ:03.10.2026

**ಮಾನ್ಯ ಪ್ರಾಂಶುಪಾಲರಿಗೆ**

**____________________ಶಾಲೆ/ಕಾಲೇಜು**

**____________________ ಜಿಲ್ಲೆ**

ಮಾನ್ಯರೆ,

ವಿಷಯ:- **"ಕಸವನ್ನು ಕಸವಾಗಿರಿಸದೇ ರಸವನ್ನಾಗಿಸುವ ಕರೆಗಂಟೆ"** – "Time up- Time up from Thrashing the Trash, it is time to Transform the Trash" ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡುವುದು ಮತ್ತು ಪ್ಲಾಸ್ಟಿಕ್‌ಗಳನ್ನು ಸ್ವಚ್ಛಗೊಳಿಸಿ, ಮರುಬಳಕೆ ಮಾಡುವ ವಿಶೇಷ ಯೋಜನೆಯನ್ನು ಶಾಲಾ/ಕಾಲೇಜುಗಳಲ್ಲಿ ಹಮ್ಮಿಕೊಳ್ಳುವಲ್ಲಿ ಮನವಿ ಕೋರಿ.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರಾಜ್ಯ ಸಂಸ್ಥೆಯು ಸುಸ್ಥಿರ ಅಭಿವೃದ್ಧಿ ಯೋಜನೆಗಳ ಅಡಿಯಲ್ಲಿ ಸಾಕಷ್ಟು ಕಾರ್ಯಚಟುವಟಿಕೆಗಳನ್ನು ನಡೆಸುತ್ತಿದ್ದೇವೆ. ಅದರಂತೆ ಡಾ॥ ರೀತು ರವಿ ಗಂಜಿಗಟ್ಟಿರವರ ಮಾರ್ಗದರ್ಶನದಲ್ಲಿ "Time up- Time up from Thrashing the Trash, it is time to Transform the Trash (**ಕಸವನ್ನು ಕಸವಾಗಿರಿಸದೇ ರಸವನ್ನಾಗಿಸುವ ಕರೆಗಂಟೆ**)" ಎಂಬ ಉತ್ತಮ ಯೋಜನೆಯನ್ನು ಹೊಂದಿ, ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡಲು ಮತ್ತು ಸ್ವಚ್ಛಗೊಳಿಸಿದ ಪ್ಲಾಸ್ಟಿಕ್‌ಅನ್ನು ಮರುಬಳಕೆ ಮಾಡಲು ವಿಶೇಷ "Time up" ಯೋಜನೆ ಹಮ್ಮಿಕೊಳ್ಳಲು ತಮ್ಮಲ್ಲಿ ಕೋರಲಾಗಿದೆ.

ಈ ಯೋಜನೆಯನ್ನು ತಮ್ಮ ಶಾಲಾ/ಕಾಲೇಜುಗಳಲ್ಲಿ ಪರಿಸರ ಸಂರಕ್ಷಣೆಗಾಗಿ ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರುಗಳಿಗೆ ಸ್ಪಷ್ಟ ಮಾಹಿತಿ ನೀಡಿ, ಅವರವರ ಮನೆಗಳಲ್ಲಿ ಹೋಟಲ್‌ನಿಂದ ತಂದಿರುವ ಅಥವಾ ಇನ್ನಿತರೆ ಮರುಬಳಸುವ ಪ್ಲಾಸ್ಟಿಕ್ ಬಾಕ್ಸ್‌ಗಳು ಉಪಯೋಗಿಸಿದ ನಂತರ, ಆ ಬಾಕ್ಸ್‌ಗಳನ್ನು ತೊಳೆದು ಸ್ವಚ್ಛಗೊಳಿಸಿ, ಒಣಗಿಸಿ, ಗನ್ನಿ ಬ್ಯಾಗ್‌ಗಳಲ್ಲಿ ಸಂಗ್ರಹಿಸಿಟ್ಟು, ಅವುಗಳನ್ನು ಶಾಲಾ-ಕಾಲೇಜುಗಳಿಗೆ ಅಥವಾ ವಾರಕ್ಕೊಮ್ಮೆ ಮನೆ ಹತ್ತಿರ ಬರುವ ಕಸ ಸಂಗ್ರಹಣೆ ಮಾಡುವ ವ್ಯಾನ್‌ಗಳಿಗೆ ನೀಡುವಂತೆ ತಾವು ವಿದ್ಯಾರ್ಥಿಗಳಿಗೆ ತಿಳಿಸುವಂತೆ ಈ ಮೂಲಕ ತಮ್ಮಲ್ಲಿ ವಿನಂತಿಸುತ್ತೇವೆ. ತಮ್ಮ ಶಾಲಾ/ಕಾಲೇಜುಗಳಲ್ಲಿ ಸಂಗ್ರಹವಾಗಿರುವ ಬಾಕ್ಸ್‌ಗಳನ್ನು ವಾರಕ್ಕೊಮ್ಮೆ ಕಸ ಸಂಗ್ರಹಿಸುವವರಿಗೆ ನೀಡಿ ಪ್ಲಾಸ್ಟಿಕ್‌ನಿಂದಾಗುವ ಪರಿಸರ ವಿನಾಶವನ್ನು ತಡೆಯಲು ಕ್ರಮ ವಹಿಸಬೇಕಾಗಿ ತಮ್ಮಲ್ಲಿ ವಿನಂತಿಸುತ್ತೇವೆ.

ತಾವು ಈ ಯೋಜನೆಯನ್ನು ತಮ್ಮ ಶಾಲಾ/ಕಾಲೇಜು ಶಿಕ್ಷಕರುಗಳ ಮುಖೇನಾ ವಿದ್ಯಾರ್ಥಿಗಳಿಗೆ ಸ್ವಚ್ಛಗೊಳಿಸಿದ ಪ್ಲಾಸ್ಟಿಕ್ ಮರುಬಳಕೆ ಬಗ್ಗೆಯ ಈ ಸ್ಪಷ್ಟ ಮಾಹಿತಿಯನ್ನು ನೀಡಲು ಕೋರಿದೆ. ಈ ಪ್ಲಾಸ್ಟಿಕ್ ಮರುಬಳಕೆ ಯೋಜನೆಯನ್ನು ಮಕ್ಕಳಲ್ಲಿ ಅತ್ಯುತ್ತಮ ಹವ್ಯಾಸ ಬೆಳೆಸಲು ಶಿಕ್ಷಕರುಗಳು ಮಕ್ಕಳನ್ನು ಪ್ರೋತ್ಸಾಹಿಸಿ ಕ್ರಮ ವಹಿಸಲು ತಿಳಿಸುವುದು. **ಈ ಬಗ್ಗೆಯ ಭಾರತ್ ಸ್ಕೌಟ್ಸ್-ಗೈಡ್ಸ್‌ನಿಂದ ಪ್ರಕಟಿಸಲ್ಪಟ್ಟ ಸ್ಪಷ್ಟ, ಸಂಕ್ಷಿಪ್ತ ಮಾಹಿತಿಯ ಪ್ರತಿಯನ್ನು ಹಿಂದಿನ ಪುಟದಲ್ಲಿ ಮುದ್ರಿಸಿದೆ.** ಈ ಯೋಜನೆಯ ಉತ್ತಮ ಫಲಿತಾಂಶವನ್ನು ಪಡೆಯುವಲ್ಲಿ ನಾವು, ನೀವೆಲ್ಲರೂ ಕೈಜೋಡಿಸಿ, ಇದರಿಂದ ಈ ಕಸ ವಿಂಗಡಣೆ ಮಾಡುವ ಪೌರಕಾರ್ಮಿಕರಿಗೆ ಬಹಳಷ್ಟು ಸಹಕಾರಿ ಆಗುವುದಲ್ಲದೆ, ಪರಿಸರ ಸಂರಕ್ಷಣೆಗೆ ಮಹತ್ತರ ಕೊಡಿಗೆ ಆಗುವುದನ್ನು ಮನಗಂಡು ತಾವೂ ಈ **"Time up"** ಯೋಜನೆಯ ಸಕ್ರಿಯ ಅನುಷ್ಠಾನಕ್ಕೆ ಸಹಕರಿಸಬೇಕಾಗಿ ಈ ಮೂಲಕ ತಮ್ಮಲ್ಲಿ ವಿನಂತಿಸುತ್ತೇವೆ.

ಸ್ಕೌಟ್ಸ್-ಗೈಡ್ಸ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

**(ಕೆ. ಗಂಗಪ್ಪ ಗೌಡ)**

ರಾಜ್ಯ ಕಾರ್ಯದರ್ಶಿ

# ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ
# The Bharat Scouts and Guides Karnataka

## "ಕಸವನ್ನು ಕಸವಾಗಿರಿಸದೇ ರಸವನ್ನಾಗಿಸುವ ಕರೆಗಂಟೆ" – "Time up- Time up from Thrashing the Trash, it is time to Transform the Trash"
















ಪರಿಸರ ಸಂರಕ್ಷಣೆಯಲ್ಲಿ "ಟೈಮ್ ಅಪ್" ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಪ್ರಾಂಶುಪಾಲರು, ದಳ ನಾಯಕರು ಹಾಗೂ ಎಲ್ಲಾ ಹಂತದ ಪದಾಧಿಕಾರಿಗಳು ಸಕ್ರಿಯವಾಗಿ ಸಹಕರಿಸೋಣ.

**ನಮ್ಮ ಸಣ್ಣ ಪ್ರಯತ್ನ – ಪರಿಸರದ ದೊಡ್ಡ ಸಂರಕ್ಷಣೆ. ಬನ್ನಿ, "ಟೈಮ್ ಅಪ್" ಯೋಜನೆಯ ಯಶಸ್ವಿಗೆ ಎಲ್ಲರೂ ಕೈಜೋಡಿಸೋಣ.**



**ಡಾ.ಪಿ.ಜಿ.ಆರ್.ಸಿಂಧ್ಯ**
ಮಾಜಿ ಸಚಿವರು ಕರ್ನಾಟಕ ಸರ್ಕಾರ
ರಾಜ್ಯ ಮುಖ್ಯ ಆಯುಕ್ತರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

www.https://bsgkarnataka.in